| ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚಿಂತಾಮಣಿ | | | |
|---|---|---|---|
| ಸಿಸಿ ನಂ. 299/2017 | | | |
| ಸಾಕ್ಷಿದಾರರ ಹೆಸರು | ಆಂಜಿನಪ್ಪ | | |
| ಗಂಡನ/ ಹೆಸರು | ನಾರಾಯಣಸ್ವಾಮಿ | ಪಿಡಬ್ಲ್ಯೂ: | 3 |
| ವಯಸ್ಸು | 49 ವರ್ಷ | ಸಿಡಬ್ಲ್ಯೂ: | 1 |
| ಉದ್ಯೋಗ | ವ್ಯವಸಾಯ | ಪ್ರಮಾಣ ವಚನ | |
| ವಾಸ ಸ್ಥಳ | ಸೂಲದೇನಹಳ್ಳಿ | ಭೋದಿಸಿದ ದಿನಾಂಕ | 09-03-23 |

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

ಈಗ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ನೋಡಿರುತ್ತೇನೆ. ಅ 30 ಸಾವಿರ ಅವರು ಶಿಕ್ಷಕರಾಗಿದ್ದು ನಮ್ಮ ದೂರದ ಸಂಬಂಧಿಕರಾಗಿರುತ್ತಾರೆ. ನಾವು ಆರೋಪಿಯಿಂದ ಕಳೆದ 8 ವರ್ಷಗಳ ಹಿಂದೆ 30 ಸಾವಿರ ಸಾಲವನ್ನು ಪಡೆದುಕೊಂಡಿದ್ದು 6 ತಿಂಗಳ ನಂತರ ನಮ್ಮ ಮನೆಯ ಬಳಿ ಬಂದು 30 ಸಾವಿರ ಅಸಲಿಗೆ 30 ಸಾವಿರ ಬಡ್ಡಿ ಯನ್ನು ಕೊಡಬೇಕು ಅಂತ ಹೇಳಿ ಕೇಳಿದ್ದು 4-5 ದಿನಗಳ ನಂತರ 40 ಸಾವಿರ ರೂ ಹಣವನ್ನು ವಾಪಸ್ಸು ಕೊಟ್ಟಿದ್ದು ಮನೆಯ ಬಳಿ ಬಂದಾಗ ನನಗೆ ಮತ್ತು ಆರೋಪಿಗೆ ಮಾತಿನ ಚಕಮಕಿಯಾಗಿರುತ್ತದೆ. ನಂತರ ಆಗಾಗ ಚಿಂತಾಮಣಿಯಲ್ಲಿ ಅವರು ಸಿಗುತ್ತಿದ್ದು ನನಗೆ ಹಣದ ಅವಶ್ಯಕತೆ ಇದ್ದುದರಿಂದ ಬೇರೆಯವರ ಬಳಿ ಹಣ ಕೇಳಿದಾಗ ಚೆಕ್ ಪುಸ್ತಕವನ್ನು ಬ್ಯಾಂಕ್ ನಲ್ಲಿ ತೆಗೆದುಕೊಂಡು ಬಂದು ನನ್ನ ಬ್ಯಾಗ್ ನಲ್ಲಿ ಇಟ್ಟುಕೊಂಡಿದ್ದು ಆರೋಪಿ ನನ್ನ ಬಳಿ ಮಾತನಾಡುತ್ತಾ ಮಾತನಾಡುತ್ತಾ ನನ್ನ ಗಮನ ಬೇರೆಡೆ ಸೆಳೆದು ಚೆಕ್ ಪುಸ್ತಕವನ್ನು ತೆಗೆದುಕೊಂಡು ಹೋಗಿದ್ದು ಅದರಲ್ಲಿ 10 ಚೆಕ್ ಹಾಳೆಗಳಿದ್ದು ಚೆಕ್ ಗಳಿಗೆ ನಾನು ಸಹಿ

ಮಾಡಿ ಇಟ್ಟಿದ್ದು ಆ ಚೆಕ್ ಗಳನ್ನು ತೆಗೆದುಕೊಂಡು ಹೋಗಿದ್ದು ಅದರಲ್ಲಿ ಒಂದು ಚೆಕ್ ಅನ್ನು 6 ಲಕ್ಷ ರೂಗಳಿಗೆ ನಗಧೀಕರಣಕ್ಕೆ ಹಾಕಿ ಅದು ನಗಧೀಕರಣವಾಗದಿದ್ದಾಗ ಅದರ ಮೇಲೆ ಪ್ರಕರಣ ದಾಖಲು ಮಾಡಿರುತ್ತಾರೆ. ಆಗ ನನಗೆ ಚೆಕ್ ಬುಕ್ ಆರೋಪಿ ತೆಗೆದುಕೊಂಡು ಹೋಗಿರುತ್ತಾರೆ ಅಂತ ಗೊತ್ತಾಗಿದ್ದು ನಂತರ ಅದರ ಬಗ್ಗೆ ದೂರು ದಾಖಲು ಮಾಡಿದಾಗ ಪೋಲಿಸರು 9 ಚೆಕ್ ಗಳನ್ನು ಪೋಲಿಸ್ ಠಾಣೆಯಲ್ಲಿ ಆರೋಪಿಯಿಂದ ಜಪ್ತುಪಡಿಸಿಕೊಂಡಿರುತ್ತಾರೆ. ನಂತರ ಕೃತ್ಯ ನಡೆದ ಸ್ಥಳಕ್ಕೆ ಬಂದು 3-4 ದಿನಗಳ ನತಂರ ತಾಲ್ಲೂಕು ದಂಡಾಧಿಕಾರಿಯವರ ಕಛೇರಿಯ ಮುಂಭಾಗ ಕನ್ನಡ ಕಲಾಸಂಘ ಎಂಬ ಪಲಕ ಅಂಟಿಸಿರುವ ಸ್ಥಳದಲ್ಲಿ ಬಂದು ಪಂಚನಾಮೆಯನ್ನು ಬೆಳಗಿನ 10 ಗಂಟೆಯಿಂದ 11 ಗಂಟೆಯವರೆಗೆ ಜರುಗಿಸಿರುತ್ತಾರೆ. ಆಗ ಇನ್ನು ಇಬ್ಬರು ಮೂರು ಜನ ಇದ್ದು ಅವರ ಹೆಸರು ನೆನಪಿರುವುದಿಲ್ಲ.

ಪಿರ್ಯಾದನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ 3 ಎಂದು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ 3 ಎ ಎಂದು, ಕೃತ್ಯ ನಡೆದ ಸ್ಥಳದ ಪಂಚನಾಮೆಯಲ್ಲಿನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ 4 ಎಂದು ಸಹಿಯನ್ನು ನಿಪಿ-4 (ಎ) ಎಂದು ಗುರುತಿಸಲಾಯಿತು.

ವಶಪಡಿಸಿಕೊಂಡ ಚೆಕ್ ಗಳನ್ನು ಹಾಜರುಪಡಿಸದ ಕಾರಣ ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.